ಡಾ।। ಎಂ. ಶಂಕರ್ ನಾಯಕ್ (ವೈದ್ಯಕೀಯ ಶಿಕ್ಷಣ ಸಚಿವರು) : ಅಧ್ಯಕ್ಷರೆ, ಈ ಸಾಲಿನ ಸಿಇಟಿ ಕೌನ್ಸಿಲಿಂಗ್ ಮುಗಿದ ಮೇಲೆ ಉಳಿದಿರುವ ಸೀಟುಗಳನ್ನು 15 ದಿವಸದ ನಂತರ ಮ್ಯಾನೇಜ್‌ಮೆಂಟ್‌ಗೆ ಕೊಡುವುದು ಹಿಂದಿನಿಂದ ಬಂದಿರುವ ಪದ್ಧತಿ. ಆದರೆ ಮೊನ್ನೆ ಸುಪ್ರೀಂ ಕೋರ್ಟಿನಲ್ಲಿ ಟಿಎಂಎ ಪೈ ಕಡೆಯುವರು ಕೇಸ್ ಹಾಕಿಕೊಂಡಾಗ ಹೇಳಿದ್ದಾರೆ : 15 ದಿವಸ ಆದ ನಂತರ ಸಿಇಟಿ ನೆಲ್ ಆಫೀಸರ್‌ನ್ನು ಡಿಎಂ ಅನ್ನು ಮತ್ತು ಇಂಜಿನಿಯರಿಂಗ್ ಸೀಟುಗಳಿಗೆ ಸಂಬಂಧಿಸಿದ ಅಧಿಕಾರಿಗಳನ್ನು ಕರೆದು ರೀಕೌನ್ಸಿಲಿಂಗ್ ಮಾಡಬೇಕು ಎಂದರೆ, ಏನು ಮಾಡ ಬೇಕೆಂದು ತೀರ್ಮಾನ ತೆಗೆದುಕೊಳ್ಳಬೇಕು ಎಂದು ಹೇಳಿ, ಆ ಸೀಟುಗಳನ್ನು ಮತ್ತೆ ಮ್ಯಾನೇಡ್‌ಮೆಂಟಿಗೆ ಬಿಡಲಿಕ್ಕೆ 8 ದಿವಸದಲ್ಲಿ ಕ್ರಮ ತೆಗೆದುಕೊಳ್ಳಬೇಕೆಂಬ ಆರ್ಡರನ್ನು ಸುಪ್ರೀಂ ಕೋರ್ಟಿನಿಂದ ಕೊಟ್ಟಿದ್ದಾರೆ. ಅದೇತರಹ ಇಲ್ಲಿ ಕಾಗೋಡು ತಿಮ್ಮಪ್ಪನವರು ಹೇಳಿದಂತೆ, "This thing will not apply will not apply for medical and dental college" ಎಂದು ಕೊಟ್ಟಿದ್ದಾರೆ. ನಾಲ್ಕುದಿವಸದ ಹಿಂದೆ ನಾನು ಲಾ ಮಿನಿಸ್ಟರ್ ಜೊತೆ, ಲಾ ಸೆಕ್ರಟರಿ ಮತ್ತು ನಮ್ಮ ಸೆಕ್ರೆಟರಿಗಳನ್ನು ಕರೆದು ಚರ್ಚೆ ಮಾಡಿದಾಗ ಪೇಮೆಂಟ್ ಸೀಟಾಗಲಿ ಫ್ರೀ ಸೀಟಾಗಲಿ ನಾನು ಮ್ಯಾನೇಜ್‌ಮೆಂಟ್‌ನವರಿಗೆ ಬಿಟ್ಟು ಕೊಡುವುದಕ್ಕೆ ಆಗುವುದಿಲ್ಲ ಅವವು ಸುಪ್ರೀಮ್ ಕೋರ್ಟಿಗೆ ಹೋಗಿ ಅಲ್ಲಿಂದ ಆರ್ಡರ್ ತರಬೇಕೆಂದು ಹೇಳಿದ್ದಾರೆ. ಎಂಡಾರ್ಸ್‌ಮೆಂಟ್ ಕೊಡಬೇಕಾದರೆಪೇಮೆಂಟ್ ಸೀಟು ಮಾತ್ರ ಎಂದು ಹೇಳಿದ್ದಾರೆ, ನಾನು ಅಧಿಕಾರಿಗಳನ್ನು ಕರೆದು ಮಾತನಾಡಿದ್ದೇನೆ. ಪೇಮೆಂಟ್ ಸೀಟುಗಳನ್ನೇನಾದರೂ ಸುಪ್ರೀಮ್ ಕೋರ್ಟಿನಿಂದ ಅಂದರೆ ಫ್ರೀ ಸೀಟುಗಳನ್ನು ಮ್ಯಾನೇಜ್‌ಮೆಂಟ್‌ಗೆ ಬಿಡುವುದಕ್ಕೆ ಅಧಿಕಾರ ಇದೆಯೆಂದು ಮತ್ತೆ ಅವರು ಲೀಗಲ್ ಅಭಿಪ್ರಾಯ ತೆಗೆದುಕೊಂಡು ನಾಳೆ ರಜಾ ಇದೆ ನಾಡಿದ್ದು ಫ್ರೀ ಆಗಿರಬಹುದು ಅಥವಾ ಪೇಮೆಂಟ್ ಸೀಟು ಆಗಿರಬಹುದು, ಅವರಿಗೆ ಶನಿವಾರ ಎಂಡಾರ್ಸ್‌ಮೆಂಟ್ ಕೊಡುತ್ತೇವೆ, ಆಮೇಲೆ ಅವರು ಸುಪ್ರೀಮ್ ಕೋರ್ಟಿಗೆ ಹೋಗಲಿ.

16. ಬೀದರ್ ಜಿಲ್ಲಾ ಪಂಚಾಯತಿಯ ಅವ್ಯವಹಾರಗಳು

ಶ್ರೀ ಸೈಯದ್ ಜುಲ್ಫಿಕರ್ ಹಶ್ಮಿ (ಬೀದರ್) : ಅಧ್ಯಕ್ಷರೇ, ನಮ್ಮ ಬೀದರ್ ಜಿಲ್ಲಾ ಪಂಚಾಯತಿಯಲ್ಲಿ ದೊಡ್ಡ ಅವ್ಯವಹಾರವಾಗಿದೆ. ಗ್ರಾಮೀಣಾಭಿವೃದ್ಧಿ ಸಚಿವರು ಕ್ರಮ ತೆಗೆದು ಕೊಂಡಿದ್ದಾರೆ. 4 ಅಧಿಕಾರಿಗಳನ್ನು ಈಗಾಗಲೇ ಸಸ್ಪೆಂಡ್ ಮಾಡಿದ್ದಾರೆ. ಅಲ್ಲಿ ಅವ್ಯವಹಾರ ಮಾಡಿದವರು ಒಂದು ಅಸೋಸಿಯೇಷನ್ ಮಾಡಿಕೊಂಡು ಪೇಮೆಂಟ್ ಮಾಡಿಸಿಕೊಳ್ಳುವುದಕ್ಕೆ ಪ್ರಯತ್ನಿಸುತ್ತಿದ್ದಾರೆ. ಇದು ನಮ್ಮ ಗಮನಕ್ಕೂ ಬಂದಿದೆ, ಪತ್ರಿಕೆಗಳಲ್ಲಿ ಹೇಳಿದ್ದೀರಿ, ಸಿಓಡಿ ಎನ್‌ಕ್ವಯರಿ ಮಾಡಿಸುವುದಾಗಿ ಹೇಳಿದ್ದೀರಿ, ಸರ್ಕಾರದಲ್ಲಿ ನನ್ನ ವಿನಂತಿ ಇಷ್ಟೇ, ನಮ್ಮಲ್ಲಿ ಈಗ ಸ್ಕೇರ್ಸಿಟಿ ಪ್ರಾಬ್ಲಂ ಆಗಿದೆ, ಪಂಪ್‌ಸೆಟ್ ಒಂದು ಗಂಟೆಯೂ

ನಡೆಯುವುದಿಲ್ಲ, ಇಂತಹ ಸಾಮಾನುಗಳೇ ಅಲ್ಲಿಗೆ ಸಪ್ಲೈ ಆಗಿರುವುದು, ಆದ್ದರಿಂದ ಸಸ್ಪೆಂಡ್ ಆಗಿರುವವರ ಮೇಲೆ ಎಲ್ಲಿಯವರೆಗೆ ತನಿಖೆ ಆಗುವುದಿಲ್ಲವೋ ಅಲ್ಲಿಯವರೆಗೆ ಪೇಮೆಂಟ್ ಮಾಡುವುದಿಲ್ಲ ಎಂದು ಸರ್ಕಾರ ಹೇಳಬೇಕು.

ಶ್ರೀ ಎಂ. ಪಿ. ಪ್ರಕಾಶ್ : ಅಧ್ಯಕ್ಷರೇ, ಮಾನ್ಯ ಸದಸ್ಯರು ತಿಳಿಸಿದಂತೆ ಅಲ್ಲಿ ಬಹಳ ಅವ್ಯವಹಾರ ನಡೆದಿದೆ ಎಂಬ ವಿಷಯ ಕಂಡುಬಂದ ಮೇಲೆ 5 ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಂಡಿದ್ದೇವೆ. ಒಬ್ಬ ನಿವೃತ್ತ ಅಧಿಕಾರಿ ಮೇಲೆ ಜಂಟಿ ವಿಚಾರಣೆ ಕೂಡ ಏರ್ಪಾಡು ಮಾಡಿದ್ದೇವೆ ಇದರ ಜೊತೆಗೆ 1992-93ನೇ ಸಾಲಿನಿಂದ ಕೊಡಬೇಕಾದ ಹಣ ಕೊಡದೆ ಅದರಲ್ಲಿ ಪ್ರಕೃತಿ ವಿಕೋಪಕ್ಕಾಗಿ ನೀಡಬೇಕಾದ ಹಣವೂ ಇದೆ. ಪ್ರಶ್ನೆ ಬಂದಿರುವುದು ಇಷ್ಟೆ ಯಾವ್ಯಾವುದರಲ್ಲಿ ನ್ಯಾಯಯುತವಾಗಿ ಕೊಡಲೇಬೇಕಾದ ಹಣ ಇದೆ ಇದನ್ನು ಕೊಡಲೇಬೇಕಾಗುತ್ತದೆ, ವಿಚಾರಣೆ ಕೂಡ ನಡೆದಿದೆ, ಉಳಿದಿರುವುದರ ಮೇಲೆ ನಾವು ತಡೆಹಿಡಿಯುತ್ತೇವೆ.

ಶ್ರೀ ಸೈಯದ್ ಜುಲಲ್ಫೀಕರ್ ಹಶ್ಮಿ: ಪರಿಸ್ಥಿತಿ ಅಲ್ಲಿ ವಿರುದ್ಧ ಇದೆ, ಕೈಗಾರಿಕೋದ್ಯಮಿಗಳು ನಮ್ಮ ವಿರುದ್ಧ ಇದ್ದಾರೆ, ಕಂಟ್ರಾಕ್ಟರ್ಸ್ ನಮ್ಮ ವಿರುದ್ಧ.

ಶ್ರೀ ಎಂ. ಪಿ. ಪ್ರಕಾಶ್ : ಸಿಓಡಿ ಎನ್‌ಕ್ವೆಯರಿಗೆ ಈಗಾಗಲೇ ರೆಫರ್ ಮಾಡಿದ್ದೇವೆ.

6.30 ಪಿ.ಎಂ

ಅಧ್ಯಕ್ಷರು : ಹೀಗೆ ಮಾಡುತ್ತಾ ಹೋದರೆ ಸಿ.ಓ.ಡಿ ಮೇಲೆ ಡಿ.ಓ.ಡಿ ಯನ್ನೂ ಮಾಡಿಕೊಳ್ಳಬೇಕಾಗುತ್ತದೆ.

ಶ್ರೀ ಎಂ. ಪಿ. ಅಪ್ಪಚ್ಚು ರಂಜನ್ (ಸೋಮವಾರ ಪೇಟೆ) : ಸನ್ಮಾನ್ಯ ಅಧ್ಯಕ್ಷರೆ, ಮೂರು ವರ್ಷಗಳ ಹಿಂದೆ ಕೊಡಗು ಜಿಲ್ಲಾ ಪರಿಷತ್ತಿನಲ್ಲಿ ಮುಖ್ಯ ಕಾರ್ಯದರ್ಶಿಗಳಾಗಿದ್ದಂಥ ಮುಕ್ತಾಂಬ ಎನ್ನುವವರ ಮೇಲೆ ಭ್ರಷ್ಟಾಚಾರದ ಆಪಾದನೆ ಮೇರೆಗೆ ಸಿ.ಓ.ಡಿ. ತನಿಖೆಯಾಯಿತು. ನಂತರ, ಭ್ರಷ್ಟಾಚಾರ ನಡೆದಿದೆಯೆನ್ನುವುದಕ್ಕೆ ನಾನು ಪ್ರಶ್ನೆಗಳನ್ನು ಕೇಳಿದ್ದೆ. ಪ್ರಶ್ನೆಗಳಿಗೆ ಒಂದು ವರ್ಷದ ತನಕವೂ ಉತ್ತರ ಬರಲಿಲ್ಲ. ತದನಂತರ, ನನ್ನ ಪ್ರಶ್ನೆಗೆ ಉತ್ತರ ಬರಲಿಲ್ಲವೆಂದು ಭೇಟಿ ಮಾಡಿ ಹೇಳಿದ ನಂತರ ಆರು ತಿಂಗಳು ಕಳೆದ ಬಳಿಕ ಉತ್ತರ ಬಂತು. ಉತ್ತರದಲ್ಲಿ ಸಿ.ಓ.ಡಿ. ತನಿಖೆಯಾಗಿದ್ದು, ಭ್ರಷ್ಟಾಚಾರದ ಪ್ರಕರಣ ಸಬೀತಾಗಿದೆಯೆಂದು ತಿಳಿದು ಬಂತು. ಆದರೆ, ಇಲ್ಲಿಯವರೆಗೆ ಅವರ ಮೇಲೆ ಯಾವುದೇ ಕ್ರಮ ತೆಗೆದುಕೊಂಡಿರಲಿಲ್ಲ. ಸರ್ಕಾರ ಅವರಿಗೆ ರಕ್ಷಣೆ ಕೊಡುತ್ತಿದೆಯೇ ಎಂಬ ಬಗ್ಗೆ ನನಗೆ ಸಂಶಯ ಬರುತ್ತಿದೆ. ಏಕೆಂದರೆ, ಅವವು ನಿವೃತ್ತರಾಗುವುದಕ್ಕೆ ಕೆಲವು ತಿಂಗಳು

ಇರಬಹುದೆಂದು ಕಾಣುತ್ತದೆ. ಅವರು ನಿವೃತ್ತರಾದರೇನೋ ನನಗೆ ಗೊತ್ತಿಲ್ಲ. ಸರ್ಕಾರ ಏಕೆ ಈ ತರಹದ ಧೋರಣೆ ತೋರಿಸುತ್ತದೆಂಬುದು ನನಗರ್ಥವಾಗುತ್ತಿಲ್ಲ. ಇದಕ್ಕೆ ಸನ್ಮಾನ್ಯ ಮಂತ್ರಿಗಳು ಉತ್ತರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಪಿ. ಪ್ರಕಾಶ್ : (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) ಸನ್ಮಾನ್ಯ ಅಧ್ಯಕ್ಷರೆ, ಇದರಲ್ಲಿ ವಿಳಂಬವಾಗಿದೆ, ನಿಜ. ಆದರೆ, ಸರ್ಕಾರದ ಮೇಲೆ ವಿನಾಕಾರಣ ಆಪಾದನೆ ಮಾಡುವುದು ಅಭ್ಯಾಸವಿದ್ದಂತೆ ಕಾಣುತ್ತದೆ. ಅಲ್ಲಿ ದುರ್ವ್ಯವಹಾರ, ಅವ್ಯವಹಾರವಾಗಿರುವ ಬಗ್ಗೆ ಮಾನ್ಯ ಶಾಸಕರೇನೂ ಪ್ರಸ್ತಾಪಿಸಿರಲಿಲ್ಲ. ಪತ್ರಿಕೆಗಳಲ್ಲಿ ಬಂದಿರುವ ವರದಿಯ ಆಧಾರದ ಮೇಲೆ ನಾವು ಸಿ.ಓ.ಡಿ. ಯಿಂದ ಎನ್‌ಕ್ವೈರಿ ಮಾಡಿಸಿದ್ದೇವೆ. ಅವರು ಐ.ಎ.ಎಸ್. ಅಧಿಕಾರಿಗಳಾಗಿದ್ದುದರಿಂದ ವರದಿ ಬಂದನಂತರ ವಿಪರೀತ ವಿಳಂಬವಾಗಿ ಆ ಐ.ಎ.ಎಸ್. ಅಧಿಕಾರಿಗಳ ಮೇಲಲ್ಲದೆ ಬೇರೆಯವರ ಮೇಲೋ ಕ್ರಮ ಕೈಗೊಳ್ಳಬೇಕೆಂದು ವ್ಯವಸ್ತೆ ನಡೆದಿತ್ತು. ನಾವು ಹೇಳಿದ್ದೆವು ಅವರು ಐ.ಎ.ಎಸ್. ಅಧಿಕಾರಿಗಳಾಗಿದ್ದರೂ ಕೂಡ ಅವರ ಮೇಲೆ ಕ್ರಮ ಕೈಗೊಳ್ಳಬೇಕೆಂದು ಪ್ರಸ್ತಾವವಾಗಿರುವುದರಿಂದ ಈಗ ನಮ್ಮ ಇಲಾಖೆಯ ಶಿಫಾರಸ್ಸಿನ ಮೂಲಕ ಮಾನ್ಯ ಮುಖ್ಯಮಂತ್ರಿಗಳ ಅವಗಾಹನೆಗೆ ಈ ಕಡತ ಹೋಗಿರುವುದರಿಂದ, ಖಂಡಿವಾಗಿಯೂ ಕ್ರಮ ಕೈಗೊಳ್ಳುತ್ತೇವೆ, ಯಾರನ್ನೂ ರಕ್ಷಣೆ ಮಾಡುವ ಉದ್ದೇಶ ನಮಗಿಲ್ಲವೆಂದು ಹೇಳಬಯಸುತ್ತೇನೆ.

ಶ್ರೀಎಂ. ಪಿ. ಅಪ್ಪಚ್ಚುರಂಜನ್ : ಅವರು ಹೇಳಿದ್ದು ಒತ್ತಾಯದ ಮೇಲೆ ನಾನು ಮಾಡಿದ್ದೇನೆ ಎಂದು. ಇದು ತಪ್ಪು ಎಂದು ನನ್ನ ಅಭಿಪ್ರಾಯ.

ಶ್ರೀ ಎಂ. ಪಿ. ಪ್ರಕಾಶ್ : ಇದಕ್ಕೆ ನಿಮ್ಮ ಒತ್ತಾಯ ಇಲ್ಲವೇ ಇಲ್ಲ, ನಾವು ಕ್ರಮ ಕೈಗೊಂಡು ನಂತರವೆ ನಿಮಗೆ ಗೊತ್ತಾಗಿರುವುದು.

xviii) ಆಳಂದ ಪಟ್ಟಣದ ಬಿ.ಡಿ.ಓ. ಕ್ವಾರ್ಟರ್ಸ್ ಬಗ್ಗೆ.

ಶ್ರೀ ಸುಭಾಷ್ ರುಕ್ಮಯ್ಯ ಗುತ್ತೇದಾರ್ (ಆಳಂದ) : ಮಾನ್ಯ ಅಧ್ಯಕ್ಷರೆ, ಆಳಂದ ಪಟ್ಟಣದಲ್ಲಿ ಬಿ.ಡಿ.ಓ ಕ್ವಾರ್ಟರ್ಸ್ ಕಟ್ಟಿ ಸುಮಾರು 15-20 ವರ್ಷಗಳಾಗಿದ್ದು, ಈಗ ಅಲ್ಲಿಗೆ ಒಬ್ಬ ಖಾಸಗಿ ವ್ಯಕ್ತಿ ಬಂದು ಇದು ತನ್ನ ಸ್ವಂತ ಜಾಗವೆಂದು ಹೇಳಿಕೊಂಡು ಖಾಸಗಿಯವರಿಗೆ ಮಾರಿದ್ದಾರಲ್ಲದೆ ಅಲ್ಲಿ ಖಾಸಗಿ ಮನೆಗಳನ್ನೂ ಕಟ್ಟಿಸಿದ್ದಾರೆ. ಇದು ಸರ್ಕಾರದ ಗಮನಕ್ಕೆ ಬಂದಿದೆಯೇ? ಇಲ್ಲವೇ? ಆ ಜಾಗದ ಬಗ್ಗೆ ತಹಸೀಲ್ದಾರ್ ಹತ್ತಿರವಾಗಲೀ, ಮುನಿಸಿಪಾಲಿಟಿಯಲ್ಲಾಗಲೀ ದಾಖಲೆ ಸಿಗುತ್ತಿಲ್ಲ. ಆದುದರಿಂದ, ಈ ಜಾಗವನ್ನು ಉಳಿಸಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಇದಕ್ಕೆ ಮಾನ್ಯ ಸಚಿವರು ಉತ್ತರಿಸಬೇಕು.